ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 5, Mar-Apr, 2023, Pp. 66-69.**
**©*IIMRD*, Mysuru**

IIMRD JOURNALS

**www.iimrd.com**

# ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನದ ನೆಲೆಗಳು

**ಮಂಜುಳಾ***

*ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಾನಗಲ್ಲ, ಹಾವೇರಿ ಜಿಲ್ಲೆ.

***ಸಾರಾಂಶ: (Abstract)***

*ಮಾನವಿಕ ಅಧ್ಯಯನಗಳು ತಮ್ಮ ಹರಹು ಮತ್ತು ಕ್ಷೇತ್ರಗಳನ್ನು ಹಿಂದೆಂದೂ ಇಲ್ಲದ ಬಗೆಯಲ್ಲಿ ವಿಸ್ತರಿಸಿಕೊಳ್ಳುತ್ತಿರುವ ಕಾಲಘಟ್ಟ ಇದು. ಸಾಮಾಜಿಕ ಮತ್ತು ರಾಜಕೀಯ ನೆಲೆಗಳು ತಮ್ಮ ಮೂರ್ತತೆಯಲ್ಲಿ ಸಾಂಸ್ಕೃತಿಕ ಸನ್ನಿವೇಶಗಳ ಅಮೂರ್ತತೆಯನ್ನೂ ಒಳಗೊಂಡು ಬಹುಮುಖಿ ಅಧ್ಯಯನ ಮಾದರಿಗಳು ಸಶಕ್ತವಾಗಿ ರೂಪುಗೊಳ್ಳುತ್ತಾ ಇತಿಹಾಸದ ಹೊಸ ಮಗ್ಗುಲುಗಳನ್ನು ತೆರೆಯುತ್ತಿರುವ ಈ ಕಾಲಘಟ್ಟದಲ್ಲಿ ಸ್ತ್ರೀವಾದ ಹಾಗೂ ಮಹಿಳಾ ಅಧ್ಯಯನ ನೆಲೆಗಳು ಪಡೆದುಕೊಳ್ಳುತ್ತಿರುವ ಮುನ್ನೆಲೆಯನ್ನು ಚರ್ಚಿಸುವುದು ಚೇತೋಹಾರಿಯಾದ ಸಂಗತಿ. ಸ್ತ್ರೀವಾದಿಗಳು ಇಂದು ಪ್ರಸ್ತುತಪಡಿಸುತ್ತಿರುವ ಅಧ್ಯಯನದ ಮಾದರಿಗಳು ಕೇವಲ ಶೈಕ್ಷಣಿಕ ಚೌಕಟ್ಟಿನವಲ್ಲವೇ ಅಲ್ಲ. ಅವುಗಳಿಗೆ ಈ ಚೌಕಟ್ಟನ್ನು ಮೀರಿದ ದೇಶೋ ವಿಶಾಲವಾದ ಆಶಯಗಳಿವೆ. ಈ ಆಶಯಗಳು ಹೆಣ್ಣಿಗೆ ಸಂಬಂಧಪಟ್ಟವು ಎನ್ನುವುದು ನಿಜ. ಅವು ಕೇವಲ ಹೆಣ್ಣಿಗೆ ಮಾತ್ರ ಸಂಬಂಧಪಟ್ಟವಲ್ಲ ಎನ್ನುವುದು ಇನ್ನೂ ನಿಜ. ಗಂಡು ಮತ್ತು ಹೆಣ್ಣನ್ನು ಏಕಪ್ರಕಾರವಾಗಿ ಒಳಗೊಳ್ಳಲು ನಡೆಸುತ್ತಿರುವ ಈ ಪ್ರಯತ್ನಗಳನ್ನು ಹೊಸ ಲೋಕದೃಷ್ಟಿಯೊಂದರ ರಚನೆ ಮತ್ತು ಪ್ರತಿಪಾದನೆ ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.*

***ಮುಖ್ಯಪದಗಳು: (Keywords)*** *ಕನ್ನಡ ಸಾಹಿತ್ಯ, ಸ್ತ್ರೀವಾದ, ಪ್ರೇರಣೆ, ಮಹಿಳಾ ಅಧ್ಯಯನ.*

**ಪೀಠಿಕೆ**

*ಸಾಲುಗಳ ನಡುವೆ ಓದಿದರೆ ಪುರುಷ ಮದದ ಬಗೆಗೆ ಹೇಳುತ್ತಿದ್ದೇನೆ. ಇಲ್ಲಿ ಇದರ ಇನ್ನೊಂದು ಮುಖವನ್ನು ನಾವು ಗಮನಿಸಬೇಕು. ನಾನು ಸೆಕೆಂಡ್ ಸೆಕ್ಸ್ ಬರೆಯುವುದಕ್ಕೆ ಪ್ರೇರಣೆ, ಪ್ರೋತ್ಸಾಹ ಕೊಟ್ಟವರಲ್ಲಿ ನೀನೇ ಮೊದಲಿಗ. ನಾನು ಪುಸ್ತಕವನ್ನು ಬರೆದು ಮುಗಿಸಿದಾಗ ನೀನು ಅದರಲ್ಲಿನ ಎಲ್ಲಾ ವಾದಗಳನ್ನು ಒಪ್ಪಿಕೊಂಡೆ. ಆದರೆ ಕಾಮುವಿನಂತಹವರು ಆ ಪುಸ್ತಕವನ್ನು ನನ್ನ ಮುಖದ ಮೇಲೆ ಬಿಸಾಡುವುದಷ್ಟೇ ಉಳಿದಿತ್ತು. ನಾನು ಅಲ್ಲಿಯವರೆಗೆ ಎಷ್ಟೆಲ್ಲ ಜನರನ್ನು ಇವರೆಲ್ಲ ಸಾಮಾಜಿಕ ಮತ್ತು ಲಿಂಗ ತಾರತಮ್ಯವನ್ನು ಮೀರಿಕೊಳ್ಳಲು ಯತ್ನಿಸುತ್ತಾ ಪ್ರಜಾತಂತ್ರವನ್ನು ಒಪ್ಪಿಕೊಳ್ಳುವ ದಾರಿಯಲ್ಲಿದ್ದವರು ಎಂದುಕೊಂಡಿದ್ದೆ. ಆದರೆ ಪುರುಷಾಂಧಕಾರ ಎಂದರೇನೆಂದು ಆಗ ನನಗೆ ಅರಿವಾಯಿತು. – ಸಿಮೋನ್ ದ್ ಬುವಾ*

*Please cite this article as:* ಮಂಜುಳಾ. (2023). ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನದ ನೆಲೆಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(5). ಪು.ಸಂ. 66–69.*

ಮೂಲತಃ ಸ್ತ್ರೀವಾದ ಗಂಡು ಮತ್ತು ಹೆಣ್ಣು ಇಬ್ಬರೂ ಸೇರಿ ಕಟ್ಟಬೇಕಾಗಿರುವ ಒಂದು 'ಬದುಕಿನ ಕ್ರಮ'ವಾಗಿದೆ. ಈ ಬದುಕಿನ ಕ್ರಮವು ಪ್ರಚಲಿತ ಮೌಲ್ಯ ವ್ಯವಸ್ಥೆಯ ವಿರುದ್ಧ ಸಾರಿರುವ ಯುದ್ಧವಲ್ಲ. ಇದು ಮುಖಾಮುಖಿಯಲ್ಲಿ ನಂಬಿಕೆಯಿಟ್ಟದ್ದಲ್ಲ. ಇದರ ಆತ್ಯಂತಿಕ ನಂಬಿಕೆಯಿರುವುದು 'ಪರಿವರ್ತನೆ'ಯಲ್ಲಿ. ಸಮಕಾಲೀನ ಜಗತ್ತಿನ ಎದುರಿಗಿರುವ ಅತ್ಯಂತ ವಿಶ್ವಾಸಾರ್ಹವಾದ ಆಯ್ಕೆಯಾಗಿ ಸ್ತ್ರೀವಾದವನ್ನು ಮುಂದೆ ಮಾಡುವಲ್ಲಿ ನಮಗಿರುವ ಬಹುದೊಡ್ಡ ಆಧಾರವೆಂದರೆ ಈ ಸಂಗತಿಗಳೇ. ಮಾನವೀಯ ಆರ್ದ್ರತೆಯನ್ನೇ ತನ್ನ ಧಾತುವಾಗಿ ಪಡೆದ ಸ್ತ್ರೀವಾದವು ವ್ಯಕ್ತಿ ಮತ್ತು ವ್ಯವಸ್ಥೆ ಎರಡನ್ನೂ ದ್ವೇಷ, ಯುದ್ಧ, ಸೋಲು, ಮುಂತಾದ ಅಮಾನವೀಯವಾದ ಪರಿಕಲ್ಪನೆಗಳಲ್ಲಿ ಗ್ರಹಿಸುವುದನ್ನೇ ವಿರೋಧಿಸುತ್ತದೆ.

ಹೆಣ್ಣು ಹೇಗೆ ಭಿನ್ನ ಹೇಳಿ ಎಂದು ಯಾರಾದರೂ ಕೇಳಿದರೆ ಕೊಡಬಹುದಾದ ಸಹಜ ಉತ್ತರವೆಂದರೆ, ಅವಳು ತನ್ನ ಹಲವು ಪಾತ್ರಗಳನ್ನು ಸಮಾನ ಆದ್ಯತೆಯಲ್ಲಿ, ಸಮಾನ ಪ್ರೀತಿಯಲ್ಲಿ, ಸಮಾನ ದಕ್ಷತೆಯಲ್ಲಿ ಮತ್ತು ಒಂದು ಇನ್ನೊಂದನ್ನು ಒಳಗೊಂಡ ಸಾಂಗತ್ಯದಲ್ಲಿ ನಿಭಾಯಿಸುವುದು ಎನಿಸುತ್ತದೆ. ಗಂಡಿನಲ್ಲಿ ಒಳಗು ಮತ್ತು ಹೊರಗುಗಳನ್ನು ಶ್ರೇಣೀಕರಣದಷ್ಟೇ ಮೇಲುಕೀಳಿನ, ಬೇಕು ಬೇಡಗಳ ಆದ್ಯತೆಗಳನ್ನು ಹೆಣ್ಣಿನಲ್ಲಿ ಗುರುತಿಸುವುದು ಕಷ್ಟ. ಬದುಕಿಗೆ ಸಂಬಂಧಪಟ್ಟ ಯಾವುದನ್ನೂ ಅವಳು ನಿರಾಕರಿಸುವುದಿಲ್ಲ. ಅವುಗಳನ್ನು ನಿರ್ವಹಿಸುವಲ್ಲಿ ಅವಳಿಗೆ ಕೀಳರಿಮೆಯೂ ಕಾಡುವುದಿಲ್ಲ. ಇದನ್ನೇ ಗಂಭೀರವಾದ ತಾತ್ವಿಕತೆಯ ಮಾತಿನಲ್ಲಿ ಹೇಳುವುದಾದರೆ, ಹೆಣ್ಣಿನ ಅನುಭವ ಗಂಡಿಗಿಂತ ಬಹುಮುಖಿಯಾದದ್ದು ಹಾಗೂ ಸಾಂದ್ರವಾದದ್ದು.

ಸಮಾನ ಆದ್ಯತೆಯ ವಿಷಯಕ್ಕೆ ಬರುವುದಾದರೆ, ಹೆಣ್ಣಿನ ವ್ಯಕ್ತಿತ್ವವೇ ಮೂಲತಃ ಹೆಣಿಗೆಯ ಅಥವಾ ನೇಯ್ಗೆಯ ಗುಣಸ್ವರೂಪದ್ದು. ಕುತೂಹಲಕಾರಿಯಾದ ಸಂಗತಿಯೆಂದರೆ, ಸಮಕಾಲೀನ ಮಹಿಳಾ ಚಿಂತನೆಗಳ ಅಧ್ಯಯನ ಮಾದರಿಯನ್ನೂ 'ನೇಯ್ಗೆ' ಎಂದೇ ಗುರುತಿಸಲಾಗುತ್ತಿದೆ. ಗುಬ್ಬಚ್ಚಿಯ ಗೂಡಿನ ಹಾಗೆ ಅವಳು ತನ್ನನ್ನು ತಾನೇ ನೇಯ್ದುಕೊಳ್ಳುತ್ತಾ ಹೋಗುತ್ತಾಳೆ ಎನ್ನುವುದು ಒಂದು ಅರ್ಥವಾದರೆ, ಇತಿಹಾಸ ಮತ್ತು ವರ್ತಮಾನಗಳ ಹಲವು ದಿಕ್ಕು ಮತ್ತು ಮೂಲಗಳಿಂದ, ಹಲವು ಜ್ಞಾನ ಶಿಸ್ತುಗಳಿಂದ ತನ್ನ ಪರಂಪರೆ ಮತ್ತು ಹೋರಾಟವನ್ನು ರೂಪಿಸಿಕೊಳ್ಳುತ್ತಿದ್ದಾಳೆ ಎನ್ನುವುದು ಇನ್ನೊಂದು ಅರ್ಥ. ಮರು ಇತಿಹಾಸ, ನಿರೂಪಣೆ ಮತ್ತು ನೇಯ್ಗೆಗಳನ್ನು ಮಹಿಳಾ ಸಂಕಥನವು ತನ್ನ ದಾರಿಯಾಗಿಸಿಕೊಂಡಿದೆ. ಮರು ಇತಿಹಾಸವೆಂದರೆ, ಇತಿಹಾಸವನ್ನು ಅದರ ವಿವರಗಳನ್ನು ಬದಲಿಸುವ ಪ್ರಯತ್ನವೆಂದಲ್ಲ, ಅದನ್ನು ಈತನಕ ನೋಡುತ್ತಿದ್ದ ಜಾಗಕ್ಕಿಂತ ಭಿನ್ನವಾದ ಜಾಗದಲ್ಲಿ ನಿಂತು ನೋಡುವುದು. ಇಡೀ ರಾಮಾಯಣವನ್ನು ಹೆಣ್ಣಿನ ಕಣ್ಣಿನಿಂದ ನೋಡಿದರೆ ಅದು ಈಗಿರುವುದಕ್ಕಿಂತ ಭಿನ್ನವಾಗಿರುತ್ತದೆ ಮಾತ್ರವಲ್ಲ, ಅದಕ್ಕೊಂದು ಸಮಗ್ರತೆಯೂ ಸಿಗುತ್ತದೆ.

ಮರು ಇತಿಹಾಸದ ಅಧ್ಯಯನದಲ್ಲಿ ಸ್ತ್ರೀವಾದಿಗಳು ಪ್ರಯತ್ನಿಸುತ್ತಿರುವುದು ಇಂಥ ಪೂರ್ಣ ದೃಷ್ಟಿಗಾಗಿ. ಇದು ಸಾಧ್ಯವಾಗುವುದು ನಾವು ಇದನ್ನು ನಿರೂಪಿಸುವ ಬಗೆಯಲ್ಲಿ ಮತ್ತು ಒಂದನ್ನು ಇನ್ನೊಂದರೊಳಗೆ ಜೋಡಿಸಿ ಹೆಣೆಯುವ, ನೇಯುವ ಪರಿಯಲ್ಲಿ. ನೇಯ್ಗೆ ಎನ್ನುವುದು ಕಲೆಯೂ ಹೌದು, ಶಾಸ್ತ್ರವೂ ಹೌದು. ಯಾವುದನ್ನೋ ಎಲ್ಲಿಂದಲೋ ತಂದು ಯಾವುದರೊಂದಿಗೋ ಸೇರಿಸಿ ನೇಯುತ್ತಾ ಹೆಣ್ಣು ತನ್ನ ಪರಂಪರೆಯ ಮತ್ತು ವ್ಯಕ್ತಿತ್ವದ ಬಟ್ಟೆಯನ್ನು, ಚಹರೆಯನ್ನು ನೇಯುತ್ತಿದ್ದಾಳೆ. ಈ ದೃಷ್ಟಿಯಿಂದ

ಎಲ್ಲ ಕಾಲದ ಹೆಣ್ಣು ಮನಸ್ಸುಗಳೂ ಇಲ್ಲಿ ತೊಡಗಿಸಿಕೊಂಡಿವೆ. ಅದು ಸೀತೆ, ದ್ರೌಪದಿಯರಿರಬಹುದು, ಅದೇ ಹೆಸರನ್ನು ಹೊತ್ತ ಕಾಲದ ವ್ಯತ್ಯಾಸವಿರುವ ಆದರೆ ವ್ಯಕ್ತಿತ್ವದ ಅದೇ ಚೈತನ್ಯವನ್ನು ಹೊಂದಿರುವ, ಹೆಚ್ಚುಕಡಿಮೆ ಅದೇ ಸವಾಲುಗಳನ್ನು ಎದುರಿಸುತ್ತಿರುವ ಈ ನಮ್ಮ ಕಾಲದವರಿರಬಹುದು.

ಈ ಘಟ್ಟದಲ್ಲಿ ಚರ್ಚಿಸಬೇಕಾದ ಇನ್ನೊಂದು ಮುಖ್ಯ ಅಂಶವಿದೆ. ವೈರುಧ್ಯದ ಸಂಗತಿಯ ಹಾಗೆ ಕಂಡರೂ ಇದು ಸತ್ಯ. ಕಳೆದ ಶತಮಾನದ ಎಲ್ಲ ಪ್ರಮುಖ ಸೈದ್ಧಾಂತಿಕ ಆಕೃತಿಗಳೂ ಶೈಕ್ಷಣಿಕವಾಗಿ ಹೆಣ್ಣಿನ ವಿಷಯಗಳನ್ನು ಬೇಕಾಗಿ, ಬೇಡವಾಗಿ ಚರ್ಚಿಸಿವೆ. ಹೆಣ್ಣಿನ ವಿಷಯದಲ್ಲಿ ಇವು ಕಾಳಜಿಯನ್ನೂ, ಆಸಕ್ತಿಯನ್ನೂ ತೋರಿಸುತ್ತವೆ. ಗಂಭೀರವಾಗಿಯೇ ಹೆಣ್ಣಿನ ಸವಾಲುಗಳನ್ನು ಇವು ಚರ್ಚಿಸುತ್ತಿರುವಂತೆ ಕಂಡರೂ, ಹೆಣ್ಣಿನ ಹೋರಾಟಕ್ಕೆ ನೈತಿಕ ಬೆಂಬಲವನ್ನು ಇವು ಸೂಚಿಸುತ್ತಿರುವಂತೆ ಕಂಡರೂ, ಆ ಹೋರಾಟದ ಜೀವನ್ಮರಣದ ತೀವ್ರತೆಗೆ ಸ್ಪಂದಿಸುವಲ್ಲಿ ಈ ಎಲ್ಲ ಸೈದ್ಧಾಂತಿಕತೆಗಳಿಗೂ ಒಂದಲ್ಲ ಒಂದು ತೊಡಕು ಇದೆ.

ಬಹುಮುಖ್ಯವಾಗಿ ಸಾಮಾಜಿಕ ವಿಜ್ಞಾನಗಳು ಅಕಾಡೆಮಿಕ್ ನೆಲೆಗಳಲ್ಲಿ ಹೊಸ ವಿನ್ಯಾಸಗಳನ್ನು ಲಿಂಗಸಂಬಂಧಿ ಆಯಾಮಗಳಲ್ಲಿ ಪಡೆದುಕೊಂಡಿದ್ದರೂ ಸಹ 'ಮಹಿಳೆ' ಒಂದು ಸಾಮಾಜಿಕ ಘಟಕವಾಗುವ ಬದಲು ಜನಸಂಖ್ಯಾ ಘಟಕವಾಗಿ, ಜೈವಿಕ ಘಟಕವಾಗಿ ಪರಿಭಾವಿಸಿಕೊಳ್ಳಲಾಗಿದೆ. ಮಹಿಳೆಯನ್ನು ಒಬ್ಬ ವ್ಯಕ್ತಿಯಾಗಿ ಪರಿಭಾವಿಸಿಕೊಳ್ಳುವ ಕ್ರಮ ಸಮಾಜ ವಿಜ್ಞಾನಗಳಲ್ಲಿ ಕಂಡುಬರುವುದಿಲ್ಲ. ಅವು ಅವರನ್ನು ತಾಯಿಯಾಗಿ, ಹೆಂಡತಿಯಾಗಿ, ಗೃಹಿಣಿಯಾಗಿ ಮಾತ್ರ ಪರಿಭಾವಿಸಿಕೊಳ್ಳುತ್ತವೆ. ಅಂದರೆ, ಆಕೆಯನ್ನು ಕೇವಲ ಆನುಷಂಗಿಕವಾಗಿ ಮಾತ್ರ ನೋಡಲಾಗುತ್ತದೆ. ಸರಿಯಾಗಿ ಹೇಳಬೇಕೆಂದರೆ, ಮಹಿಳೆಯರನ್ನು ಕುಟುಂಬಕ್ಕೆ ಸಂವಾದಿಯಾಗಿ ಪರಿಭಾವಿಸಿಕೊಳ್ಳುವುದು ರೂಢಿಯಲ್ಲಿದೆ. ಲಿಂಗ ಸಂಬಂಧಗಳ ದೃಷ್ಟಿಯಿಂದ ನೋಡಿದಾಗ ಸಮಾಜ ವಿಜ್ಞಾನಗಳು ಏಕಾಕಾರಿ ಜ್ಞಾನಶಿಸ್ತುಗಳಂತೆ ಕಂಡುಬರುತ್ತವೆ.

20ನೇ ಶತಮಾನದ ಮಧ್ಯಭಾಗದಿಂದೀಚೆಗೆ ಮಾಹಿತಿ ತಂತ್ರಜ್ಞಾನದ ಕ್ರಾಂತಿಯ ಮೂಲಕ ಬಂಡವಾಳಶಾಹಿ ಆರ್ಥಿಕತೆಯು ಸಾರರೂಪಿ ನೆಲೆಯಲ್ಲಿ ಗಂಡು–ಹೆಣ್ಣು ಸಂಬಂಧಗಳನ್ನು ಸಹಜೀಕರಿಸಿತು. ಹೀಗೆ ಮಾಡುವಾಗ ಸೇವಾವಲಯ ಎನ್ನುವ ಹೊಸ ದುಡಿಮೆಯ ಕ್ಷೇತ್ರ ಶಿಕ್ಷಿತ ಮಹಿಳೆಗೆ ಕೆಲವು ಅವಕಾಶಗಳನ್ನು ಒದಗಿಸಿತು ನಿಜ. ಇಂತಹ ಮಹಿಳೆಗೆ ಖಾಸಗೀ ಕಂಪನಿಗಳು ವೇತನವನ್ನೂ ಸಹ ನೀಡಿತು. ಆದರೆ, ಬಹುಸಂಖ್ಯಾತ ತಳಮಟ್ಟದಲ್ಲಿ ಅಂದರೆ, ಸೇವಾವಲಯದಿಂದ ಹೊರತಾದ ಕೃಷಿ, ಕೈಗಾರಿಕೆ ಮುಂತಾದ ಕ್ಷೇತ್ರಗಳಲ್ಲಿ ದುಡಿಯುವ ಮಹಿಳೆಗೆ ಅತೀ ಕಡಿಮೆ ವೇತನ ನೀಡಲಾಯಿತು. ಹೀಗೆ ಇಲ್ಲೊಂದು ದ್ವಂದ್ವ ಮಹಿಳೆಯರ ಮಧ್ಯೆ ಉಂಟಾಯಿತು. ಹೀಗಿರುವಾಗ ಸ್ತ್ರೀವಾದಿ ತಿಳಿವಳಿಕೆ ಕೇವಲ ಅಕಾಡೆಮಿಕ್ ಆಗಿ ಮಾತ್ರ ಉಳಿಯಿತು.

ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನವು ಅಂತಿಮವಾಗಿ ಪ್ರತಿಪಾದಿಸ ಹೊರಟಿರುವುದು, ರಚಿಸಲು ಹೊರಟಿರುವುದು ಏನನ್ನು? ಹೆಣ್ಣು ಎನ್ನುವ 'ಸಾಮಾಜಿಕ', ರಾಜಕೀಯ, ಸಾಂಸ್ಕೃತಿಕ, ಧಾರ್ಮಿಕ, ರಚನೆಯ ನಾಶ. ಇದನ್ನು ಅನುಭಾವಿ ಪರಿಕಲ್ಪನೆಯೊಂದರ ಮೂಲಕ ಹೇಳುವುದಾದರೆ, ಸ್ಥಾಪಿತ ಹೆಣ್ಣಿನ ರಚನೆಯನ್ನು ವಿಸರ್ಜಿಸುವುದು. ಇದರರ್ಥ, ಗಂಡು ಎನ್ನುವ ಸ್ಥಾಪಿತ ರಚನೆಯನ್ನು ವಿಸರ್ಜಿಸುವುದೂ ಆಗಿದೆ. ಸಮಕಾಲೀನ ಸ್ತ್ರೀವಾದಿ ಅಧ್ಯಯನಗಳ ಎರಡು ಮುಖ್ಯ ಚಲನೆಗಳೆಂದರೆ, ಸಾಂಸ್ಕೃತಿಕ ಸ್ತ್ರೀವಾದ ಮತ್ತು

ನೇಯ್ಗೆ. ಸಾಂಸ್ಕೃತಿಕ ಸ್ತ್ರೀವಾದವು ಹೆಣ್ಣಿನ ಶಕ್ತಿಮೂಲಗಳ ಮರು ವ್ಯಾಖ್ಯಾನದ ಮೂಲಕ ಹೆಣ್ಣಿನ ಚಹರೆಗಳನ್ನು ಅಧಿಕೃತಗೊಳಿಸಲು ಪ್ರಯತ್ನಿಸುತ್ತಿದೆ. ಹೆಣ್ಣಿನ ದೌರ್ಬಲ್ಯಗಳೆಂದು, ಅವಳ ಕಡ್ಡಾಯ ಕರಾರಿನ ಗುಣಗಳೆಂದು ತಿಳಿಯಲಾಗುತ್ತಿದ್ದವನ್ನು 'ಸ್ತ್ರೀ ವಿಶಿಷ್ಟ' ಆಯಾಮಗಳೆಂದು ಸ್ಥಾಪಿಸಲು ಹವಣಿಸುತ್ತಿದೆ. 'ನೇಯ್ಗೆ'ಯು ಇತಿಹಾಸ, ಪುರಾಣಗಳೂ ಸೇರಿದಂತೆ, ವಿವಿಧ ಸೈದ್ಧಾಂತಿಕ ಅಂಶಗಳಿಂದ, ವಿವಿಧ ಕಲಾಪ್ರಕಾರಗಳಲ್ಲಿನ ಹೆಣ್ಣಿನ ಅಭಿವ್ಯಕ್ತಿ ಮತ್ತು ಅವುಗಳನ್ನು ಹೆಣ್ಣಿನ ಓದಿನ ಕ್ರಮಕ್ಕೆ ಒಳಗು ಮಾಡುತ್ತಲೇ ಸ್ತ್ರೀವಾದಿ ಅಧ್ಯಯನವನ್ನು ಕಟ್ಟುವುದರಲ್ಲಿ ಆಸಕ್ತವಾಗಿದೆ.

**ಉಪಸಂಹಾರ**

ಒಟ್ಟಿನಲ್ಲಿ ಮಹಿಳೆಯ ಅರಿವಿನಷ್ಟೇ, ಪುರುಷನಲ್ಲಿ ಹೆಣ್ಣನ್ನು ಕುರಿತಂತೆ ಮೂಡಬೇಕಾದ ಅರಿವೂ ಮುಖ್ಯ ಎನ್ನುವುದನ್ನು, ಮೇಲಾಟಗಳ ಭ್ರಮೆಯಿಲ್ಲದ, ಸ್ಪರ್ಧೆಯಿಲ್ಲದ, ಬದುಕು ಕೊಡಬಹುದಾದದ್ದನ್ನು ಗಂಡು ಹೆಣ್ಣಿಬ್ಬರ ಪ್ರಾಕೃತಿಕ ಹಕ್ಕೆನ್ನುವುದನ್ನು ಒಪ್ಪುವುದರ ಮೂಲಕ 'ಆಗೋಣ ಈ ಜಗದ ತಾಯಿ–ತಂದೆ' ಎನ್ನುವುದನ್ನು ಜೈವಿಕ, ಬೌದ್ಧಿಕ ಮತ್ತು ಮನೋವಿನ್ಯಾಸದ ಮಜಲುಗಳಲ್ಲಿ ಸಾಧಿಸಿಕೊಳ್ಳಲು ಹಂಬಲಿಸುತ್ತಿರುವುದೇ ಸ್ತ್ರೀವಾದ ಮತ್ತು ಸಮಕಾಲೀನ ಮಹಿಳಾ ಅಧ್ಯಯನದ ಮೂಲ ನೆಲೆಯಾಗಿದೆ.

**ಪರಾಮರ್ಶನ ಗ್ರಂಥಗಳು:**


- ಆಶಾದೇವಿ ಎಂ.ಎಸ್. (2016). *ನಾರೀಕೇಳಾ* (ಪ್ರಜಾವಾಣಿ ಅಂಕಣ ಬರಹ). ಪ್ರಜಾವಾಣಿ ಪ್ರಕಾಶನ, ಬೆಂಗಳೂರು.
- ಗಾಯತ್ರಿ ನಾವಡ. (2000). ಭಾರತೀಯ ಸ್ತ್ರೀವಾದ: ಒಂದು ಸಂಕಥನ. ಪ್ರಸಾರಾಂಗ, ಕನ್ನಡ ವಿವಿ, ಹಂಪಿ.
- ಕೇಶವಶರ್ಮ ಕೆ. (2013). ಸ್ತ್ರೀವಾದಿ ಪರಿಕಲ್ಪನೆಗಳು. ದೇಸಿ ಪುಸ್ತಕ, ಬೆಂಗಳೂರು.
- ಪ್ರಜಾವಾಣಿ, ವಿಜಯ ಕರ್ನಾಟಕ ದಿನಪತ್ರಿಕೆಗಳಿಂದ ಆಯ್ದ ಬರಹಗಳು, ಬೆಂಗಳೂರು.
- ಶ್ರೀಮತಿ ಹೆಚ್. ಎಸ್. ಸ್ತ್ರೀವಾದ ಚಿಂತನೆ ಮತ್ತು ಹೋರಾಟ.
- ವಿಠ್ಠಲ್‌ರಾವ್ ಟಿ. ಗಾಯಕ್ವಾಡ್. (2001). ಸ್ತ್ರೀವಾದಿ ವಿಮರ್ಶೆ ಸ್ವರೂಪ ಮತ್ತು ಪರಿಕಲ್ಪನೆ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.